**ವ್ಯಾಖ್ಯಾನ:**

# ಏಳುತ್ತ ಗೋವಿಂದಗೆ ಕೈ ಮುಗಿಯುವೆ

ಪ್ರಾತ:ಕಾಲದಿಂದ ಪ್ರಾರಂಭಿಸಿ ಸದಾ ಶ್ರೀ ಹರಿಯ ಚಿಂತನೆಯಲ್ಲಿಯೇ ಕಾಲ ಕಳೆಯಬೇಕು ಎನ್ನುವುದನ್ನು ಶ್ರೀ ಪುರಂದರ ದಾಸರು ಈ ಉಗಾಭೋಗದ ಮೂಲಕ ತಿಳಿಸುತ್ತಿದ್ದಾರೆ.

ಏಳುತ್ತಿರುವಾಗಲೇ (ಎದ್ದ ಮೇಲೆ ಅಲ್ಲ) ಗೋವಿಂದನಿಗೆ ಕರ ಜೋಡಿಸಬೇಕು.

**ಗೋ ಎಂದರೆ ಕಿರಣಗಳು.**

ಅವುಗಳಲ್ಲಿದ್ದು ಇನಗಭಸ್ತಿಗನೆನಿಸಿ ಜಗತ್ತನ್ನು ಬೆಳಗುವ ಹರಿಯು ಹೇಗೆ ಕಿರಣಗಳು ಎಲ್ಲ ಕಡೆ ಹರಡುತ್ತವೆಯೋ ಹಾಗೆ ಅನಂತ ರೂಪಗಳಿಂದ ಎಲ್ಲೆಡೆ ಆವರಿಸಿ ಇರುವವನಾಗಿ ಸಕಲ ಕರ್ಮ ಪ್ರೇರಕನಾಗುವನು.

ಮುಖ್ಯವಾಗಿ ನನ್ನ ಬಲ ಬಲಣ್ಣಿನಲ್ಲಿ ವಿಶ್ವನಾಗಿ ಜಾಗ್ರದಾವಸ್ತಾ ಪ್ರೇರಕನಾಗಿ ಎಚ್ಚರಿಕೆ ಕೊಟ್ಟದ್ದರಿಂದ ಕಣ್ಣು ತೆಗೆದು ನೋಡಲು ಸಾಧ್ಯವಾದದ್ದು. ಆದ್ದರಿಂದ ಭಕ್ತಿಪೂರ್ವಕ ಶ್ರೀ ಹರಿಯ ದರ್ಶನ ಮಾಡಿ ನಮಸ್ಕರಿಸಬೇಕು.

ಮೂಲರೂಪಿ ನಾರಾಯಣನಿಂದಲೇ ನರಸಿಂಹ, ಕೃಷ್ಣಾದಿ ರೂಪಗಳು ಉಧದಿಯ ಊರ್ಮಿಯಂತೆ ಹೊರಬಂದಿರುವ ಅವನದೇ ರೂಪಗಳೆಂದು ಅವನ ಅನಂತ ರೂಪಗಳನ್ನು ನೆನೆಯಬೇಕು.

ಹದಿನಾರು ಸಾವಿರದ ನೂರು ಗೋಪಿಯರರಸ, ಎನ್ನಾಳುವ ಧೊರೆ ಅಂದರೆ ಮಮ ಸ್ವಾಮಿ, ಸರ್ವ ಸ್ವಾಮಿ ಎಂದು ಚಿಂತಿಸುತ್ತಿರಬೇಕು.

ಹದಿರಾರು ಸಾವಿರದ ನೂರು ಜನರು ಅಗ್ನಿ ಪುತ್ರರು. ತಪಸ್ಸು ಮಾಡಿ ವಾಯು ದೇವರನ್ನು ಒಲಿಸಿ ಸ್ತ್ರೀಯರಾಗಿ ಈಗ ಕೃಷ್ಣನ ಮಡದಿಯರಾಗುವ ಭಾಗ್ಯ ಪಡೆದಂತೆ, ನಾವೂ ವಾಯುದೇವರ(ಮಧ್ವರ) ಶಾಸ್ತ್ರಾನುಯಾಯಿಗಳಾಗಿ ಹರಿಪ್ರೀತಿ ಗಳಿಸೋಣ ಎನ್ನುವುದು ದಾಸರ ಆಶಯ.

**ಶ್ರೀ ಕೃಷ್ಣಾರ್ಪಣಮಸ್ತು**

**ಲೇಖಕರು:** ಸೌ. ಚೇತನಾ ವಾಮಾನರಾವ ಕುಲಕರ್ಣಿ, ವಿಜಯಪುರ, ಕರ್ನಾಟಕ